

## ನವಿಲು ಕುಣಿದಾವು...

"ಇದು ಮಾಮೂಲಿ ಸಿನಿಮಾ. 'ತರ್ಕ' ಮತ್ತು 'ಉತ್ಕರ್ಷ' ಚಿತ್ರಗಳ ನಂತರ ಕನ್ನಡದ ಬೆಳ್ಳಿತೆರೆ ಕಾಣುತ್ತಿರುವ ಅದ್ಭುತ ಥ್ರಿಲ್ಲರ್". ಇದು, 'ಜಟ್ಟ' ಸಿನಿಮಾದ ಬಗ್ಗೆ ಹಂಚಿಕೆದಾರ ಬಾಷಾ ಅವರ ಮಾತು. ಚಿತ್ರದ ನಾಯಕ ಕಿಶೋರ್ ಅವರಿಗೂ 'ಜಟ್ಟ' ವಿಭಿನ್ನ ಸಿನಿಮಾ ಅನ್ನಿಸಿದೆ. ಹೀಗೆ 'ಜಟ್ಟ' ಸಿನಿಮಾದ ಬಗ್ಗೆ ಒಳ್ಳೆಯ ಅನಿಸಿಕೆಗಳು ವ್ಯಕ್ತವಾದಾಗಲೆಲ್ಲ ನಿರ್ದೇಶಕ ಗಿರಿರಾಜ್ ಅವರ ಮುಖದಲ್ಲಿ ನವಿಲುಗಳು ಕುಣಿಯತೊಡಗುತ್ತವೆ.

ಮೂವತ್ತೈದು ಸಾವಿರ ರೂಪಾಯಿ ವೆಚ್ಚದಲ್ಲಿ 'ನವಿಲುಗಳು' ಎನ್ನುವ ಸಿನಿಮಾ ರೂಪಿಸಿದ್ದ ಗಿರಿರಾಜ್ ಈಗ 'ಜಟ್ಟ' ಚಿತ್ರವನ್ನು ತೆರೆಕಾಣಿಸುವ ಪ್ರಯತ್ನದಲ್ಲಿದ್ದಾರೆ. ಅವರ ನಿರ್ದೇಶನದ ಇನ್ನೊಂದು ಸಿನಿಮಾ 'ಅದ್ವೈತ'. ಇದೇ ನಿರ್ದೇಶಕರು ಆ್ಯಕ್ಷನ್–ಕಟ್ ಹೇಳುತ್ತಿರುವ 'ಮೈತ್ರಿ' ಚಿತ್ರದ ಬಗ್ಗೆ ಗಾಂಧಿನಗರ ಬಿಡುಗಣ್ಣಾಗಿದೆ. ಮೋಹನ್‌ಲಾಲ್ ಮತ್ತು ಪುನೀತ್ ರಾಜಕುಮಾರ್ ಒಟ್ಟಿಗೆ ನಟಿಸಿರುವ 'ಮೈತ್ರಿ' ಕಮರ್ಷಿಯಲ್ ನೆಲೆಗಟ್ಟಿನ ಪ್ರಯೋಗಶೀಲ ಸಿನಿಮಾ ಎನ್ನುವ ಮಾತಿದೆ. ಹೀಗೆ, ಮೂರು ಸಿನಿಮಾಗಳ ಕಾರಣದಿಂದ ಸುದ್ದಿಯಲ್ಲಿರುವ ಗಿರಿರಾಜ್ ಸಿನಿಮಾ ಬದುಕಿನಲ್ಲೀಗ ನವಿಲುಗಳು ಪ್ರವೇಶಿಸಿದಂತಿವೆ.

ಮತ್ತೆ 'ಜಟ್ಟ' ವಿಷಯಕ್ಕೆ ಬರೋಣ. ಹೊನ್ನಾವರ ಪರಿಸರದ ಅರಣ್ಯ ಪ್ರದೇಶದಲ್ಲಿ ಬೆಳೆದ ಹುಡುಗನೊಬ್ಬನ ಕಥೆ ಇದಂತೆ. 'ಒಂದು ನೆಲದ ಬನಿಯೇ ಕಥೆಯಾಗಿ, ಚಿತ್ರವಾಗಿ ಅರಳಿದೆ' ಎನ್ನುತ್ತಾರೆ ಗಿರಿರಾಜ್. ರೀಮೇಕ್ ಮಾಡುವ ನಿರ್ದೇಶಕರೆಲ್ಲ ಕಥೆಯ ನೇಟಿವಿಟಿ ಬಗ್ಗೆ ಮಾತನಾಡುವುದು ರೂಢಿ. ಅಂಥ ನಿರ್ದೇಶಕರಿಗೆ, 'ನೇಟಿವಿಟಿ' ಎಂದರೆ ಏನು ಎನ್ನುವುದಕ್ಕೆ 'ಜಟ್ಟ' ಉತ್ತರವಾಗುವುದೆ?



## ಇದು 'ಅಮೂಲ್ಯ' ಸಮಯ!

'ಶ್ರಾವಣಿ ಸುಬ್ರಹ್ಮಣ್ಯ' ಸಿನಿಮಾ ತೆರೆ ಕಾಣುವ ಸಮಯ ಸನ್ನಿಹಿತವಾದಂತೆ, ನಟಿ ಅಮೂಲ್ಯ ಅವರ ಮುಖದಲ್ಲಿ ನಿರೀಕ್ಷೆಯ ಬೆಳ್ಳಿಗೆರೆಯೊಂದು ಕಾಣಿಸಿಕೊಂಡಿದೆ. 'ಮನಸಾಲಜಿ' ಚಿತ್ರದ ಸೋಲಿನ ನಂತರ ಸಿನಿಮಾ ಸಹವಾಸ ಸದ್ಯಕ್ಕೆ ಸಾಕು ಎನ್ನುವಂತೆ ಓದಿನಲ್ಲಿ ಮುಳುಗಿಹೋಗಿದ್ದ ಅಮೂಲ್ಯ, ಈಗ ಸಿನಿಮಾದತ್ತ ಮತ್ತೆ ಮುಖ ಮಾಡಿದ್ದಾರೆ. ವಿಷಯ ಇಷ್ಟೇ. ಪ್ರಸಕ್ತ ಶೈಕ್ಷಣಿಕ ವರ್ಷದೊಂದಿಗೆ ಅವರ ಬಿ.ಕಾಂ. ಪದವಿ ಮುಗಿಯುತ್ತದೆ. ಅಲ್ಲಿಂದ ಮುಂದಕ್ಕೆ ಒಂದೆರಡು ವರ್ಷ ಸಿನಿಮಾಗಳಲ್ಲಿ ಗಂಭೀರವಾಗಿ ತೊಡಗಿಕೊಳ್ಳಬೇಕು ಎನ್ನುವುದು ಅವರ ಯೋಚನೆ. 'ಶ್ರಾವಣಿ' ಗೆದ್ದರೆ ತಮ್ಮ ಯೋಚನೆಗೆ ಸ್ಪಷ್ಟ ದಿಕ್ಕು ಸಿಗಬಹುದು ಎನ್ನುವುದು ಲೆಕ್ಕಾಚಾರ.

ಗಣೇಶ್ ನಾಯಕರಾಗಿರುವ 'ಶ್ರಾವಣಿ ಸುಬ್ರಹ್ಮಣ್ಯ' ಚಿತ್ರವನ್ನು ಅಮೂಲ್ಯ ಸುಲಭದಲ್ಲಿ ಒಪ್ಪಿಕೊಳ್ಳಲಿಲ್ಲವಂತೆ. ನಿರ್ದೇಶಕ ಮಂಜು ಸ್ವರಾಜ್ ಮತ್ತು ನಿರ್ಮಾಪಕ ಸುರೇಶ್ ಅವರು ದುಂಬಾಲು ಬಿದ್ದ ಕಾರಣ ಕಥೆ ಕೇಳುವ ಮನಸು ಮಾಡಿದ್ದಾರೆ. ಕಥೆ ಕೇಳಿದ ಮೇಲೆ ಇಲ್ಲವೆನ್ನಲು ಮನಸೇ ಆಗದೆ ಶ್ರಾವಣಿ ಪಾತ್ರದಲ್ಲಿ ನಟಿಸಿದ್ದಾರೆ. ಈ ಪಾತ್ರ ಅವರಿಗೆ ಎಷ್ಟು ಇಷ್ಟವಾಗಿದೆಯೆಂದರೆ, ಡಬ್ಬಿಂಗ್ ಸಮಯದಲ್ಲಿ ಬಿದ್ದೂ ಬಿದ್ದೂ ನಗುತ್ತಿದ್ದರಂತೆ. ನಗುವ ಮುಂದಿನ ಪಾಳಿ ಪ್ರೇಕ್ಷಕರದು.

■ ರಘು

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65